ದಿನಾಂಕ 02-06-2023 ರಂದು ಆರ್.ಡಬ್ಲ್ಯು -**1** ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲುಃ ಅರ್ಜಿದಾರರ ವಕೀಲರ ಪರ ಶ್ರೀ ಕೆ.ಬಿ.ಎ ವಕೀಲರಿಂದ**

1) ನಾನು ಸಾಮಾನ್ಯವಾಗಿ ಕೇವಲ ಕಾರ್ಮಿಕ ನ್ಯಾಯಾಲಯದ ಪ್ರಕರಣಗಳನ್ನು ನಡೆಸುತ್ತೇನೆ ಎನ್ನುವುದು ಸರಿಯಲ್ಲ. ನಾನು ಎಲ್ಲಾ ರೀತಿಯ ಪ್ರಕರಣಗಳನ್ನು ನಡೆಸುತ್ತೇನೆ. ಯಾವುದೇ ಒಂದು ಕಾರ್ಖಾನೆಗೆ ಸೇವಾ ನಿಯಮಗಳಿಗೆ ಸಂಬಂಧಪಟ್ಟಂತೆ ಸ್ಥಾಯಿ ಆದೇಶಗಳು ಇರುತ್ತವೆ. ಅದೇ ಸಂಸ್ಥೆಗಳಿಗೆ ಸೇವಾ ನಿಯಮಗಳು ಇರುತ್ತವೆ. ಪ್ರತಿವಾದಿ ಸಂಸ್ಥೆ ಒಂದು ಕಾರ್ಖಾನೆ ಆಗಿರುತ್ತದೆ. ಪ್ರತಿವಾದಿ ಸಂಸ್ಥೆಯು ತಮ್ಮ ಸಂಸ್ಥೆಯ ಸ್ಥಾಯಿ ಆದೇಶದ ದೃಢೀಕೃತ ನಕಲನ್ನು ನನ್ನ ಮುಂದೆ ಹಾಜರುಮಾಡಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ಸ್ಥಾಯಿ ಆದೇಶದ ನಕಲನ್ನು ನನ್ನ ಮುಂದೆ ಹಾಜರುಪಡಿಸಿದ್ದು ಆಂತರಿಕ ವಿಚಾರಣೆಯಲ್ಲಿ ನಿಶಾನೆ ಎಂದು ಗುರುತಿಸಿರುವುದಿಲ್ಲ. ಸದರಿ ಸ್ಥಾಯಿ ಆದೇಶವನ್ನು ನನ್ನ ಮುಂದೆ ಹಾಜರುಪಡಿಸದ ಕಾರಣ ನಿಶಾನೆ ಎಂದು ಗುರುತಿಸಿಲ್ಲ ಎನ್ನುವುದು ಸರಿಯಲ್ಲ. ಅಪಾದನಾ ಪಟ್ಟಿಯನ್ನು ಕಾರ್ಖಾನೆಯವರು ಸ್ಥಾಯಿ ನಿಯಮಗಳಿಗೆ ಅನುಗುಣವಾಗಿ ನೀಡಿದ ಬಗ್ಗೆ ಅಪಾದನಾ ಪಟ್ಟಿಯಲ್ಲಿ ಉಲ್ಲೇಖ ಮಾಡಿರುವುದಿಲ್ಲ.

2) ಆಂತರಿಕ ವಿಚಾರಣೆ ಸಮಯದಲ್ಲಿ ಸಾಕ್ಷಿದಾರರಾದ ರಮೇಶ ಬಂಗೇರಾ ಮತ್ತು ಹಂಸರಾಜ್ ಇವರ ಸಾಕ್ಷಿ ಹೇಳಿಕೆಗಳನ್ನು ನಾನು ನನ್ನ ಕೈಬರಹದಲ್ಲಿ ದಾಖಲಿಸಿಕೊಂಡಿದ್ದೇನೆ, ಏಕೆಂದರೆ ಅವರು ಲಿಖಿತವಾಗಿ ಮುಖ್ಯವಿಚಾರಣೆ ತಂದಿರುವುದಿಲ್ಲ. ನಾನು ಸದರಿ ಸಾಕ್ಷಿದಾರರಿಗೆ ಅವರ ಮುಖ್ಯವಿಚಾರಣೆಯನ್ನು ಲಿಖಿತವಾಗಿ ಪ್ರಮಾಣ ಪತ್ರದ ರೂಪದಲ್ಲಿ ಕೊಡಬಹುದು ಎಂದು ಮಾಹಿತಿ ಕೊಟ್ಟಿರುವುದಿಲ್ಲ ಮತ್ತು ಆ ಬಗ್ಗೆ ನಡಾವಳಿಯಲ್ಲಿ ಉಲ್ಲೇಖ ಮಾಡಿರುವುದಿಲ್ಲ. ದಿನಾಂಕ 10-08-2020 ರ ಆಂತರಿಕ ವಿಚಾರಣೆಯ ನಡಾವಳಿಯನ್ನು ಪ್ರಿಂಟರ್ ಅನುಕೂಲ ಇದ್ದ ಕಾರಣ ನನ್ನ ಲ್ಯಾಪ್ ಟಾಪ್ ನಲ್ಲಿ ನಾನು ನಡಾವಳಿಯನ್ನು ಬೆರಳಚ್ಚು ಮಾಡಿರುತ್ತೇನೆ. ನಾನು ಆಡಳಿತ ಮಂಡಳಿಯ 3 ನೇ ಸಾಕ್ಷಿದಾರ ಸಂತೋಷ ಸಾಲ್ಯಾನ್ ಈತನ ಹೇಳಿಕೆಯನ್ನು ಕೈಬರಹದಲ್ಲಿ ದಾಖಲಿಸಿರುವುದಿಲ್ಲ, ಆದರೆ ಸಾಕ್ಷಿದಾರ ತನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿದ್ದನು. ಸದರಿ ಸಾಕ್ಷಿದಾರ ಮುಖ್ಯವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ಪ್ರಮಾಣ ಪತ್ರ ಸಲ್ಲಿಸುವ ಕುರಿತಾಗಿ ನನ್ನಿಂದ ಅನುಮತಿ ಕೇಳಿರುವುದಿಲ್ಲ. ಸದರಿ ಸಮಯದಲ್ಲಿ ಸಾಕ್ಷಿದಾರನ ಮುಖ್ಯವಿಚಾರಣೆಯ ಪ್ರಮಾಣ ಪತ್ರ ಸ್ವೀಕರಿಸಲು ಅರ್ಜಿದಾರನಿಗೆ ತಕರಾರು ಇದೆಯೋ ಹೇಗೆ ಎಂದು ಕೇಳಿದ ಬಗ್ಗೆ ನೆನಪಿರುವುದಿಲ್ಲ. ಸಂತೋಷ ಸಾಲ್ಯಾನ್ ಕಾರ್ಖಾನೆಯ ಜನರಲ್ ಮ್ಯಾನೇಜರ್ ಇರುತ್ತಾನೆ. ಸದರಿ ಸಂತೋಷ ಸಾಲ್ಯಾನ್ ಗೆ ನನ್ನ ಮುಂದೆ ಮೌಖಿಕವಾಗಿ ಸಾಕ್ಷಿ ಹೇಳಲು ಆಗದೇ ಇದ್ದ ಕಾರಣ ನಾನೇ ಆತನಿಗೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಲು ಹೇಳಿದ್ದೆನು ಎನ್ನುವುದು ಸರಿಯಲ್ಲ. ನಾನು

ಸದರಿ ಸಾಕ್ಷಿದಾರನಿಗೆ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಹಾಕಬಹುದು ಎಂದು ಹೇಳಿದೆನೋ ಇಲ್ಲವೋ ಎಂದು ನೆನಪಿರುವುದಿಲ್ಲ. ಈ ಪ್ರಕರಣದಲ್ಲಿ ಸತೀಶ್ ಸನಿಲ್ ಎನ್ನುವಾತ ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿದ್ದು ಇರುವುದಿಲ್ಲ.

3) ಸಾಮಾನ್ಯವಾಗಿ ಯಾವುದೇ ಕಾರ್ಮಿಕ ಅಶಿಸ್ತಿನಿಂದ ನಡೆದುಕೊಂಡಲ್ಲಿ ಆತನಿಗೆ ಮೇಮೋ ಕೊಟ್ಟು ಸಮಜಾಯಿಷಿ ಕೇಳುತ್ತಾರೆ. ಸಮಜಾಯಿಷಿ ನೀಡಿದ ನಂತರ ಕಾರ್ಮಿಕನಿಗೆ ಅಪಾದನಾ ಪಟ್ಟಿಯನ್ನು ನೀಡಿ ನಂತರ ಆಂತರಿಕ ತನಿಖೆ ಮಾಡಬಹುದಾಗಿದೆ, ಆದರೆ ಕೆಲವು ಬಾರಿ ಮೇಮೋ ಮೇಲೆ ಆಂತರಿಕ ತನಿಖೆಯನ್ನು ಮಾಡಬಹುದಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರನಿಗೆ ಅಪಾದನಾ ಪಟ್ಟಿ ಮತ್ತು ಆಂತರಿಕ ತನಿಖಾ ನೋಟಿಸನ್ನು ಒಂದೇ ಬಾರಿ ನೀಡಿರುತ್ತದೆ. ಸದರಿ ನೋಟಿಸಿನಲ್ಲಿ ಅಂದರೆ ನಿಶಾನೆ ಆರ್ - 9 ರಲ್ಲಿ ಅರ್ಜಿದಾರನಿಗೆ 7 ದಿನದಲ್ಲಿ ನೋಟಿಸಿಗೆ ಉತ್ತರ ಕೊಡುವಂತೆ ಸೂಚಿಸಿರುತ್ತದೆ. ನಿಶಾನೆ ಆರ್ -9 ಕ್ಕೆ ಅರ್ಜಿದಾರ ನಿಶಾನೆ ಆರ್ -14 ರಂತೆ ಉತ್ತರ ಕೊಟ್ಟಿರುತ್ತಾನೆ. ನಿಶಾನೆ ಆರ್ -9 ನ್ಯಾಯದ ನೈಸರ್ಗಿಕ ನಿಯಮಕ್ಕೆ ವಿರುದ್ಧವಾಗಿದೆ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆ ಅರ್ಜಿದಾರನಿಗೆ ಸಮಜಾಯಿಷಿ ನೀಡಲು ಸಾಕಷ್ಟು ಕಾಲಾವಕಾಶ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಿಶಾನೆ ಆರ್ - 9 ರೊಡನೆ ದಾಖಲೆಗಳ ಮತ್ತು ಸಾಕ್ಷಿದಾರರ ವಿವರಗಳನ್ನು ಪೂರೈಸಿಲ್ಲ ಎನ್ನುವುದು ಸರಿ ಇದೆ. ಆಂತರಿಕ ತನಿಖಾ ಸಮಯದಲ್ಲಿ ಅರ್ಜಿದಾರನಿಗೆ ದಾಖಲೆಗಳ ವಿವರ ಮತ್ತು ಸಾಕ್ಷಿದಾರರ ವಿವರಗಳನ್ನು ಪೂರೈಸಿಲ್ಲ ಎನ್ನುವುದು ಸರಿಯಲ್ಲ.

4) ಇಂದು ನ್ಯಾಯಾಲಯದ ಮುಂದೆ ಇರುವ ಅರ್ಜಿದಾರರನ್ನು ಆಂತರಿಕ ವಿಚಾರಣಾ ಸಮಯದಲ್ಲಿ ನೋಡಿರಬಹುದಾಗಿದೆ. ಅರ್ಜಿದಾರನ ಹುದ್ದೆ ಐಸ್ ಪ್ಲಾಂಟ್ ಹೆಲ್ಪರ್ ಎಂದು ಇದೆ. ಅರ್ಜಿದಾರನ ವಿದ್ಯಾರ್ಹತೆ ಏನು ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಐಸ್ ಪ್ಲಾಂಟ್ ಹೆಲ್ಪರ್ ನ ಕರ್ತವ್ಯದಲ್ಲಿ ಏನು ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅರ್ಜಿದಾರನಿಗೆ ಸರಿಯಾಗಿ ಪಾಟೀಸವಾಲು ಮಾಡಲು ಬಿಟ್ಟಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರನು ಕೇಳಿದ ಪಾಟೀಸವಾಲಿನ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ನಾನು ಪೂರ್ಣವಾಗಿ ದಾಖಲಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರನು ಕೊಟ್ಟ ಹೇಳಿಕೆಯನ್ನು ಸಹ ಸರಿಯಾಗಿ ದಾಖಲಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆಯ ಪ್ರಸೆಂಟಿಂಗ್ ಆಫೀಸರ್ ಹಾಜರಿದ್ದರೂ ಸಹ ಅರ್ಜಿದಾರನ ಪಾಟೀಸವಾಲನ್ನು ನಾನೇ ಕೇಳಿ ದಾಖಲಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಆಂತರಿಕ ವಿಚಾರಣೆಯ ಪ್ರತಿದಿನದ ನಡಾವಳಿಯ ಒಂದು ನಕಲನ್ನು ಅದೇ ದಿನ ಅರ್ಜಿದಾರನಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಾನ ಅರ್ಜಿದಾರನಿಗೆ ಸರಿಯಾಗಿ ಅವಕಾಶ ಕೊಡದೇ ನನ್ನ ಮನಸ್ಸಿಗೆ ತೋಚಿದಂತೆ ಆಂತರಿಕ ವಿಚಾರಣೆ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆಯ

ಆಡಳಿತ ಮಂಡಳಿಗೆ ಅನುಕೂಲವಾಗುವಂತೆ ಅರ್ಜಿದಾರ ಯಾವುದೇ ತಪ್ಪು ಮಾಡದಿದ್ದರೂ ಸಹ ಆತನ ಮೇಲೆ ಸುಳ್ಳು ವಿಚಾರಣಾ ವರದಿಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯ ಸಾಕ್ಷಿದಾರರ ಮುಖ್ಯವಿಚಾರಣೆ ಆದ ನಂತರ ಅವರಿಗೆ ಪಾಟೀಸವಾಲು ಮಾಡಬಹುದು ಎಂದು ನಾನು ಅರ್ಜಿದಾರನಿಗೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯವರ ಸಾಕ್ಷಿ ವಿಚಾರಣೆ ಆದ ನಂತರ ಅರ್ಜಿದಾರನಿಗೆ ತನ್ನ ಸಾಕ್ಷಿ ವಿಚಾರಣೆ ಮಾಡಬಹುದು ಎಂದು ಮತ್ತು ಆತನು ಹೇಳಿಕೆ ಕೊಡಬಹುದು ಎಂದು ನಾನು ಹೇಳಿಲ್ಲ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯವರು ಅರ್ಜಿದಾರನಿಗೆ ಪಾಟೀಸವಾಲು ಮಾಡಬಹುದು ಎಂದು ನಾನು ಅರ್ಜಿದಾರನಿಗೆ ತಿಳಿಸಿಲ್ಲ ಎನ್ನುವುದು ಸರಿಯಲ್ಲ.

5) ಆಂತರಿಕ ವಿಚಾರಣೆ ಸಮಯದಲ್ಲಿ ರಮೇಶ ಬಂಗೇರಾ , ಹಂಸರಾಜ್ ಮತ್ತು ಸಂತೋಷ ಸಾಲ್ಯಾನ್ ಇವರು ಅರ್ಜಿದಾರನ ಮೇಲೆ ಆಡಳಿತ ಮಂಡಳಿ ದೂರು ಕೊಟ್ಟಿದ್ದಾರೆ ಎಂದು ನಾನು ಅರ್ಜಿದಾರನ ಸಾಕ್ಷಿದಾರನ ಸಾಕ್ಷಿ ದಾಖಲಿಸುವಾಗ ಸದರಿ ದೂರುಗಳನ್ನು ನಿಶಾನೆ ಆಗಿ ಗುರುತಿಸಿರುತ್ತೇನೆ. ಮೇಲೆ ಹೇಳಿದ ರಮೇಶ ಬಂಗೇರಾ , ಹಂಸರಾಜ್ , ಸಂತೋಷ ಸಾಲ್ಯಾನ್ ಇವರುಗಳು ಅರ್ಜಿದಾರ, ಅಶೋಕ , ರತ್ನಾಕರ ಶೆಣೈ ಇವರುಗಳು ತಮಗೆ ಕಾರ್ಮಿಕ ಸಂಘಟನೆಗೆ ಸೇರಿಕೊಳ್ಳುವಂತೆ ಬೆದರಿಕೆ ಹಾಕುತ್ತಿರುವರು ಎಂದು ಮತ್ತು ಕಿರುಕುಳ ಕೊಡುತ್ತಿರುವರು ಎಂದು ಪೊಲೀಸರಿಗೆ ಮತ್ತು ಸಹಾಯಕ ಕಾರ್ಮಿಕ ಆಯುಕ್ತರಿಗೆ ದೂರು ಕೊಟ್ಟಿರುತ್ತಾರೆ ಎನ್ನುವ ಕುರಿತು ಯಾವುದೇ ಪತ್ರಗಳನ್ನು ಆಂತರಿಕ ವಿಚಾರಣಾ ಸಮಯದಲ್ಲಿ ಆಡಳಿತ ಮಂಡಳಿಯವರು ಹಾಜರು ಮಾಡಿರುವುದಿಲ್ಲ. ಆಡಳಿತ ಮಂಡಳಿಯ ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ತಾವು ಕಾರ್ಮಿಕ ಸಂಘಟನೆಗೆ ರಾಜೀನಾಮೆ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ , ಆದರೆ ಆ ಬಗ್ಗೆ ದಾಖಲೆ ಹಾಜರುಮಾಡಿರುವುದಿಲ್ಲ.

6) ಮೊಹಮದ್ ಎನ್ನುವ ಕಾರ್ಮಿಕನನ್ನು ಆಡಳಿತ ಮಂಡಳಿಯವರು ಆಂತರಿಕ ವಿಚಾರಣಾ ಸಮಯದಲ್ಲಿ ನನ್ನ ಮುಂದೆ ವಿಚಾರಣೆ ಮಾಡಿರುವುದಿಲ್ಲ. ಆಡಳಿತ ಮಂಡಳಿಯವರು ನನಗೆ ಅರ್ಜಿದಾರನಿಗೆ ಕೊಟ್ಟ ಅಪಾದನಾ ಪಟ್ಟಿಯಲ್ಲಿನ ಆರೋಪಗಳನ್ನು ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ಪೂರೈಸಲು ನನಗೆ ಕೇಳಿರುತ್ತಾರೆ. ಆಂತರಿಕ ವಿಚಾರಣಾ ವ್ಯಾಪ್ತಿಯನ್ನು ಬದಲಾಯಿಸುವ ಅಥವಾ ಹೆಚ್ಚಿಸುವ ಅಧಿಕಾರ ನನಗೆ ಇರುವುದಿಲ್ಲ, ಆದರೆ ಆಡಳಿತ ಮಂಡಳಿಯು ಹೆಚ್ಚಿನ ದೋಷರೋಪಣಾ ಪೂರೈಸಿದಲ್ಲಿ ಆ ಬಗ್ಗೆ ಆಂತರಿಕ ವಿಚಾರಣೆ ಮಾಡುವ ಅಧಿಕಾರ ನನಗೆ ಇರುತ್ತದೆ. ಈ ಪ್ರಕರಣದಲ್ಲಿ ಆಂತರಿಕ ವಿಚಾರಣೆ ಆದ ನಂತರ ಆಡಳಿತ ಮಂಡಳಿ ಹೆಚ್ಚುವರಿ ಆರೋಪಣಾ ಪಟ್ಟಿಯನ್ನು ಪೂರೈಸಿರುವುದಿಲ್ಲ. ನಾನು ಆಡಳಿತ ಮಂಡಳಿಗೆ ಖುಷಿ ಪಡಿಸಲೆಂದು ಅರ್ಜಿದಾರ ಹಾಜರುಪಡಿಸಿದ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೆ ಏಕಪಕ್ಷೀಯವಾದ ವಿಚಾರಣಾ

ವರದಿಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಆಂತರಿಕ ತನಿಖೆಯನ್ನು ಆರಂಭ ಮಾಡುವ ಮೊದಲು ಅರ್ಜಿದಾರ ಮತ್ತು ಎದುರುದಾರ ಸಂಸ್ಥೆಗೆ ಅಂದರೆ ಮಂಡನಾಧಿಕಾರಿಗೆ ತನಿಖೆಯ ರೀತಿ ನಿಯಮಗಳನ್ನು ವಿವರಿಸಿರುತ್ತೇನೆ. ನಾನು ಅರ್ಜಿದಾರನಿಗೆ ಯಾವಾಗ ಆತನ ದಾಖಲೆಗಳನ್ನು ಮತ್ತು ಹೇಳಿಕೆಗಳನ್ನು ಹಾಜರುಪಡಿಸಬೇಕೆಂದು ವಿವರಿಸಿಲ್ಲ ಎನ್ನುವುದು ಸರಿಯಲ್ಲ.

7) ಎದುರುದಾರ ಸಂಸ್ಥೆ ನನಗೆ ಆಂತರಿಕ ವಿಚಾರಣೆಯ ತನಿಖಾಧಿಕಾರಿ ಎಂದು ನೇಮಕ ಮಾಡಿದ ಬಗ್ಗೆ ಪ್ರತ್ಯೇಕವಾಗಿ ಆದೇಶ ನೀಡಿರುವುದಿಲ್ಲ, ಸಾಕ್ಷಿ ಸ್ವತಃ ಹೇಳುವುದೇನೆಂದರೆ ಆಂತರಿಕ ತನಿಖಾ ನೋಟಿಸಿನಲ್ಲಿ ಆ ಬಗ್ಗೆ ಉಲ್ಲೇಖ ಇರುತ್ತದೆ. ನಾನು ಎದುರುದಾರ ಸಂಸ್ಥೆಗೆ ಆಂತರಿಕ ತನಿಖೆ ಮಾಡಲು ಒಪ್ಪಿಕೊಂಡಿದ್ದೇನೆಂದು ಒಂದು ಪತ್ರವನ್ನು ನೀಡಿರಬಹುದಾಗಿದೆ. ನನಗೆ ಈ ಪ್ರಕರಣದ ಆಂತರಿಕ ವಿಚಾರಣೆಯನ್ನು ಮಾಡಲು ಯಾವುದೇ ನೇಮಕಾತಿ ಆದೇಶವನ್ನು ಕೊಟ್ಟಿಲ್ಲ ಹಾಗೂ ನಾನು ಎದುರುದಾರ ಸಂಸ್ಥೆ ಗೆ ನನ್ನ ಒಪ್ಪಿಗೆ ಪತ್ರವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ